ಇದು ಒಂದು ದಿವ್ಸಕ್ಕ ಮುಗೀಲಿಲ್ಲ. ವಾರದಾಗ ಒಂದೆರೆಡು ಸಲಾ ಆಗ್ಲಿಕ್ಕತ್ತು. ಅಕಿ ಅಳೋದು, ಚೀರೋದು ನಮಗೂ ಸ್ವಲ್ಪಸ್ವಲ್ಪ ಗೊತ್ತಾಗಲಿಕ್ಕತ್ತು. ನನಗ ಆವಾಗ ಹನ್ನೊಂದ ವರ್ಷ. ಅಕಿ ಎದುರಿಗೆ ನಿಂತು ಕೇಳೇ ಬಿಟ್ಟೆ. ಹಿಂದ ಉಳದಾವ್ರೂ ನಿಂತಿದ್ರು. ಅಕಿ ಬಿಕ್ಕಿ ಬಿಕ್ಕಿ ಅತ್ಲು. 'ಯಾರಿಗೂ ಹೇಳಬ್ಯಾಡ್ರಿ. ಅವ್ವಗೂ ಸುದ್ದಾ. ಅಕಿ ಕೆಲಸಕ್ಕ ಹೋಗೋದ್ರಿಂದನ ನಮ್ಮ ಹೊಟ್ಟಿ ನಡದದ. ನಿಮ್ಮ ಸಾಲಿ ನಡದದ. ಅಕಿಗೆ ಗೊತ್ತಾದ್ರ ಕೆಲಸಾ ಬಿಟ್ಟ ಬಿಡ್ತಾಳ. ಆಮ್ಯಾಲ ಮತ್ತ ಉಪಾಸನ' ಅಂತ ಗಂಗಾ ತಾಕೀತು ಮಾಡಿದ್ಲು. ನಾವೆಲ್ಲಾ ಸುಮ್ಮನ ಬಾಯಿ ಮುಚಗೊಂಡು ಮಾರಿ ಕೆಳಗ ಹಾಕಿದ್ವಿ. ಅವತ್ತು ಯಾಕ ಸುಮ್ಮ ಕೂತೆ ಅಂತ ಈಗ ನನ್ನ ನಾ ಬೈಕೋತೇನಿ. ನಾ ಒಂದೀಟರೆ ಬಾಯಿ ತಗದಿದ್ರ ಅಕಿ ಬಾಳೆ ಹಸನಾಕ್ತಿತ್ತೇನೋ ಅನಸ್ತೈತಿ. ಆದರ ಆವಾಗ ಏನೂ ತಿಳಿಲಿಲ್ಲ. ರಾತ್ರಿ ರಡಗಾಣಿ ಮಾಡಿದ ಮ್ಯಾಲೆ ಅಪ್ಪಗ ಮುಂಜಾನೆ ಜ್ಞಾನೋದಯ ಆಧಂಗ ಆಗ್ತಿತ್ತು. ತಲಿ ಎತ್ತಿ ಗಂಗಾನ ಮಾರಿ ನೋಡತಿದ್ದಿದ್ದಿಲ್ಲ. ನಮ್ಮ ಜೋಡಿ ಕೂತು ಚಪಾತಿ, ಪಲ್ಯ ತಿಂದು ಒಂದ ಮಾತಾಡದ ಅವ್ವ ಬರೋಕಿಂತಾ ಮುಂಚೆ ಹೋಗಿಬಿಡಾಂವ. ರಾತ್ರಿ ಮತ್ತದ ಗತಿ. ಅದ ಕಥಿ.

ಎಷ್ಟ ದಿವ್ಸ ಹಿಂಗ ನಡೀತದ? ಅವ್ವ ಆರನೇ ತಿಂಗಳು ಕೆಲಸಕ್ಕ ಹೊಂಟಿದ್ಲು. ಮುಂದಿನ ತಿಂಗಳು ಅವರು ಮುಂಬೈಕ್ಕ ಹೋಗಾವ್ರಿದ್ದರು. ಅಷ್ಟರಾಗ ಗಂಗಾ ವಾಂತಿ ಮಾಡಕೊಳ್ಳೋದು ಅವ್ವ ನೋಡೇ ಬಿಟ್ಲು. ನಾಕ ಹಡದಾಕಿಗೆ ಸಂಶಯ ಬಂತು. 'ಏನಾತು? ಯಾರಂವ? ಎಲ್ಲಿ ಹೋಗಿದ್ದಿ?' ಅಂತ ಎಷ್ಟ ಥರದ್ಲೆ ಕೇಳಿದ್ಲು. ಏನಾದ್ರೂ ಗಂಗಾನ ಉತ್ತರ ಅಳೋದೊಂದ. ಕಡೀಕ ಕೋಲು ಹಿಡಕೊಂಡು ಬಾರಸ್ಲಿಕ್ಕೆ ಸುರು ಮಾಡಿದ್ಲು. ನನಗ ತಡಕೊಳ್ಳಿಕ್ಕೆ ಆಗಲಿಲ್ಲ. ಕೈಯಾಗಿನ ಕೋಲು ಕಸಗೊಂಡು ಖರೇ ಹೇಳಿಬಿಟ್ಟೆ. ಆಘಾತ ಆತು ಅಕಿಗೆ. ನೆಲಕ್ಕ ಕುಸದ ಬಿಟ್ಲು. ಎದಿ ಬಡಕೊಂಡು ಅಳಕೋತ 'ಬರೇ ಕುಡಕ ಅಂತಿಳಕೊಂಡಿದ್ದೆ. ಮಗಳ್ನ ಹಾಳು ಮಾಡೋವಷ್ಟು ನಾಲಾಯಕ ಅದಾನಂತ ಎಂದೂ ವಿಚಾರ ಮಾಡಿರಾಕಿಲ್ಲ. ನಾಲಾಯಕ... ಹಲ್ಕಾ... ರಾಕ್ಷಸನ್ನ ತಂದು...' ಅಂತ ಬೈದ ಬೈದ್ಲು. 'ಮದಲ ನನಗ ಹೇಳಬೇಕಾಗಿತ್ತ ಹುಚ್ಚ ಹುಡುಗಿ. ಅಂವಗ ಅಂಜಿ ಬಾಳೆ ಕೆಡಿಸ್ಗೊಂಡ್ಯಲ್ಲ. ಭಂಗಾರದಂಥಾ ಕೂಸು ನಂದು' ಅಂತ ಅಕಿನ್ನ ಅಪಿಗೊಂಡು ಅತ್ಲು. ನಾವೂ ಎಲ್ಲಾರೂ ಅತ್ತು ಕೆಂಪಾದ್ವಿ. 'ನೀವರ ಹೇಳಬೇಕಾಗಿತ್ತು. ಬಾಳ್ಯಾ, ನಿನಗ ಹೇಳ್ಲಿಕ್ಕೇನಾಗಿತ್ತು ಧಾಡಿ?' ಅಂತ ನಮ್ಮನ್ನೂ ಬೈದ್ಲು. ಆದರ ಬೈಯೋದರಿಂದ, ಅಳೋದರಿಂದ ಸಮಸ್ಯಾ ಪರಿಹಾರ ಆಗೂದಿಲ್ಲಲಾ. ಮುಂದಿನ ವಿಚಾರ ಮಾಡಬೇಕಾಗಿತ್ತು. ತಾಬಡತೋಬ(ಆಗಿಂದಾಗ) ನಮ್ಮ ಸ್ವಾದರ ಮಾವಗ ಪತ್ರ ಬರಿಸಿ ಹಾಕಿದ್ಲು.

ಅವತ್ತ ರಾತ್ರಿ ಗಂಡಗಚ್ಚಿ ಹಾಕಿ ಕಾದು ನಿಂತ್ಲು ನೋಡ್ರಿ ಭದ್ರಕಾಳೀಗತೆ. ಅಪ್ಪ ಯಥಾಪ್ರಕಾರ ನಶಾದಾಗ ಸೈಗಲ್‌ನ ಹಾಡು ಹಾಡಕೋತ ಮನಿಗೆ ಬಂದಾ. ಅಕಿನ್ನ... ಅಕಿ ಅವತಾರಾ ನೋಡಿ ಘಾಬರ್ಯಾದ. ಎಲ್ಲಾ ನಶಾ ಇಳದು ಹೋತು. ಮದ್ಲ 'ನಾ ಅಲ್ಲ, ನಾ ಯಾಕ...' ಅಂದಾಂವ ಸುಮ್ಮನಾಗಿಬಿಟ್ಟ. ಬೈಯೋದಷ್ಟ ಅಲ್ಲ, ನಾಲ್ಕೇಟು ಹಾಕಿದ್ಲು. ಏನೂ ಉಪಯೋಗಾಗ್ಲಿಲ್ಲ. ಅಂವ ಮಾರಿ ಸೈತ ಮ್ಯಾಲೆ ಎತ್ತದನ ಅಳಕೋತ ಕೂತ ಬಿಟ್ಟಾ. ಹೆಚ್ಚು ಗದ್ಲಾ ಮಾಡಿದ್ರ ಆಜೂ ಬಾಜೂ ಮಂದಿಗೆ ಗೊತ್ತಾಗಿ ಗಂಗಾನ ಮಾನ ಹೋಗ್ತದಂತ ಅಕಿನ ಗಪ್ಪಾದ್ಲು. ಮರದಿವ್ಸ 'ಆರಾಮಿಲ್ಲ, ಬರ್ಲಿಕ್ಕಾಗೂದಿಲ್ಲ' ಅಂತ ಕೆಲಸದ ಮನಿಗೆ ತುಕಾನ ಕಡೆ ಹೇಳಿ ಕಳಿಸಿ ಗಂಗಾನ ಜೋಡಿ ನನ್ನೂ ಕರಕೊಂಡು ಬೆಳಗಾವಿಗೆ ಬಂದ್ಲು. ಸಿವಿಲ್ ಹಾಸ್ಪಿಟಲ್‌ನ್ಯಾಗ ಡಾಕ್ಟರಿಗೆ ಕೈ ಮುಗದು ಎಲ್ಲಾ ಕಥಿ ಹೇಳಿ ತಗೀಲಿಕ್ಕೆ ಹೇಳಿದ್ಲು. ಗಂಗಾನ್ನ ಒಳಗ ಕರಕೊಂಡ್ಹೋಗಿ ತಪಾಸಣೆ